ತುಂಡುಗಳ ಧೂಳು ಜಾಡಿಸಿ ಗೀಸುಳಿ ಹಿಡಿದು ಕೆಲಸಕ್ಕೆ ತೊಡಗಿಯೇಬಿಟ್ಟ. 'ಅವನೇನು ಮಾಡ್ತಾನೆ ಅಪ್ಪಾ?' ಅಂತ ನಿರಂತರ ಕೌತುಕದಲ್ಲಿ ಕೇಳಿ ಕೇಳಿ ಕಡೆಗೂ ಒಂದು ಉತ್ತರ ಪಡೆದುಕೊಂಡೆ. ಆತ ನಮಗಾಗಿ ಒಂದು ಹೊಸ ಕಪಾಟು ಮಾಡುವವನಿದ್ದಾನೆ ಎಂದು ತಿಳಿದೊಡನೆ, 'ಹಾಗಾದ್ರೆ ಅದರಲ್ಲಿ ಇಡಲು ಹೊಸ ಅಂಗಿ ತರ್ತೀಯಾ?' ಅಂತ ಮತ್ತೆ ಮತ್ತೆ ಕೇಳ್ತಾಯಿದ್ದೆ. ಎಲ್ಲರ ಜೀವನ ಮಾರ್ಗಗಳೂ ಅಡಚಣೆಗಳಿಂದಲೇ ತೊಡಗಿಕೊಂಡು, ಅನಿವಾರ್ಯಗಳನ್ನು ಎಡವುತ್ತ, ಅಯಾಚಿತಗಳಲ್ಲೇ ನಡೀತಾಯಿದ್ದ ಕಾಲ. ಅಭಾವಗಳೇ ಸ್ವಭಾವಗಳಾಗಿ ಹೊಂದಾಣಿಕೆಯೇ ಬದುಕಾಗಿದ್ದ ದಿನಗಳು. ಆಚಾರಿಯ ಅನ್ನದ ವ್ಯವಸ್ಥೆಯೂ ನಮ್ಮ ಮನೆಯಲ್ಲೇ ಆಗಬೇಕಿತ್ತು. ಶಾಲೆಯಲ್ಲಿ ಹೆಡ್ಮಾಷ್ಟ್ರಾಗಿದ್ದ ಅಪ್ಪ ತರುತ್ತಿದ್ದ ಸಾಮಾನಿನಲ್ಲಿ, ತಿಂಗಳಿಗೊಮ್ಮೆ ಅಜ್ಜಿಯ ಕೈಗಿಡುತ್ತಿದ್ದ ಪುಡಿಗಾಸಿನಲ್ಲಿ ಮನೆಯಲ್ಲಿದ್ದ ನಾಲ್ಕಾರು ಮಂದಿಯ ನಿತ್ಯಯಾತ್ರೆ ಸುಲಭವಿರಲಿಲ್ಲ. ಅಜ್ಜಿಯ ಕೈಯ ನಾಜೂಕಿನ ಚುರುಕು ರೇಖೆಗಳಲ್ಲಿ ಹೇಗೋ ಎಲ್ಲ ಸರಿದೂಗುತ್ತಿತ್ತು. ಅಲ್ಲ, ತೂಗಿ ತೂಗಿ ಸರಿಯಾಗ್ತಿತ್ತು.

ಬೆಳಗಿನಿಂದ ತನ್ನ ಕೆಲಸದ ಮಗ್ನತೆಯಲ್ಲೆ ಉಳಿದಿದ್ದ ಆಚಾರಿ ಸಾಯಂಕಾಲ ಎಲ್ಲಿಗೋ ಹೋಗಿ ಕೈಯಲ್ಲಿ ಮತ್ತೊಂದು ಗಂಟಿನೊಡನೆ ಬಂದು ನಿಂತ. 'ಮಾರಾಪು ಸಮೇತ ಬಂದಿದಾನೆ. ಇವ ಇಲ್ಲೇ ಇರೂದು ಬದ್ಧ, ಹೌದ?' ಅಂತ ಅಜ್ಜಿ ಗೊಣಗಿದರೂ ಅಮ್ಮ ಕ್ಯಾರೆ ಮಾಡಲಿಲ್ಲ. ಆಕೆಯ ತಮ್ಮ, ನನ್ನ ಮಾವ ಕಳಿಸಿದ ಆಳು ಅಂತ ಅಮ್ಮನಲ್ಲಿ ಸಣ್ಣ ಮೋಹವಿತ್ತೆ? ಬಾವಿಕಟ್ಟೆ ಆಚೆಬದಿಗೆ ಬಟ್ಟೆ ಒಗೆದು ಲೈಫ್‌ಬಾಯ್ ಸೋಪು ಹಚ್ಚಿಕೊಂಡು ಸ್ನಾನಮಾಡಿ ಬಂದು ನಿಂತ ವೇಲಾಯುಧ, ಹಣೆಗಿಟ್ಟ ವಿಭೂತಿ ಪ್ರಸಾದಗಳಿಂದ ಉಜ್ವಲನಾಗಿದ್ದ. ಬೆಳಗ್ಗೆ ಬಂದಾಗ ಹಣೆಯ ಮೇಲೆ ಅಡ್ಡಗೆರೆಯಲ್ಲಿ ಗಂಧವಿತ್ತು. ಅಪ್ಪ ತಾವು ಉಣ್ಣುವ ಮೊದಲು ಅವನಿಗೆ ಬಡಿಸಲು ಹೇಳುತ್ತಿದ್ದರು. ಅಜ್ಜಿಯೇ ಕೆಂಪುಸೀರೆ ನಿರಿಗೆ ಎತ್ತಿಕಟ್ಟಿ ಒಂದು ಅಕಲಂಕ ಆಸ್ಥೆಯಲ್ಲಿ ಊಟವಿಕ್ಕುತ್ತಿದ್ದರು. ಅಮ್ಮನ ಕೈ ಸಡಿಲಾದರೆ ಅನ್ನುವ ಭಯವೂ ಇರಬಹುದು. ಸಣ್ಣದಾಗಿ ತೇಗಿ ಕೈತೊಳೆದು ಮಲಗಲು ಹೋಗುವ ಮೊದಲು, ಶ್ರದ್ಧೆಯಿಂದ ಅವನನ್ನೇ ಗಮನಿಸುತ್ತಿದ್ದ ನನ್ನನ್ನು ನೋಡಿ, 'ಮೋಳೇ, ಪೇರೆಂದಾಣ್?' ಎಂದು ಮನೋಹರವಾದೊಂದು ಮುಗುಳ್ನಗೆಯೊಂದಿಗೆ ಕೇಳಿದಾಗ ಕವಿದ ಪರವಶಭಾವ ಮುಂದೆಯೂ ನನ್ನನ್ನು ಬಿಟ್ಟುಹೋಗಲಿಲ್ಲ. ಸಾಮಾನನ್ನೆಲ್ಲಾ ದನದ ಹಟ್ಟಿಯ ಹಿಂದುಗಡೆ ಒತ್ತಿಟ್ಟು ಆ ಸಣ್ಣ ರೂಮಿನೊಳಗೊಂದು ಸ್ವತಂತ್ರ ಪರಿಶುದ್ಧಿಯ ಪರಿಣಾಮ ಬಿಂಬಿಸಿದ್ದ. ಪೂರ್ವದ ಕಡೆಯ ಗೋಡೆಯ ಬದಿಗೆ ಮಣೆಯ ಮೇಲೆ ಗುರುವಾಯೂರಪ್ಪ ಮತ್ತು ಸ್ವಾಮಿ ಅಯ್ಯಪ್ಪನ ಚಿತ್ರಪಟಗಳನ್ನು ಆನಿಸಿಟ್ಟು ದೀಪ ಹಚ್ಚಿ ಊದುಕಡ್ಡಿ ಉರಿಸಿದ್ದ. 'ಜೋಪಾನ, ದೀಪ ನೋಡಿಕೊ, ಬತ್ತಿಯನ್ನು ಇಲಿ ಕಚ್ಚಿ ಒಯ್ದರೆ ಹಟ್ಟಿಯೇ ಉರಿದುಹೋದೀತು' ಎಂದು ಹಿಂದೆ ನಿಂತ ಅಜ್ಜಿ ಎಚ್ಚರಿಸುವುದನ್ನು ಮರೆಯಲಿಲ್ಲ.

ಯಾವುದೇ ಸಂಬಂಧವಾದರೂ ಅದರ ಸಂಕೇತರೂಪ ವಿಶ್ವಾಸವಾಗಿದ್ದರಷ್ಟೆ ಅದು ಉಳಿಯಬಲ್ಲುದು. ಅದೆಷ್ಟೆಂದು ನೆನಪಿಲ್ಲ, ತಿಂಗಳುಗಟ್ಟಲೆ ನಡೆಯುತ್ತಿದ್ದ ಕಪಾಟಿನ ಕೆಲಸದೊಂದಿಗೆ ವೇಲಾಯುಧನ ಬಂಧ ಮನೆಯಲ್ಲಿ ಬಿಗಿಯಾಗುತ್ತಿತ್ತು. ಸಮಯವಿದ್ದಾಗ ಸಣ್ಣಪುಟ್ಟ ಕೆಲಸಗಳನ್ನೆಲ್ಲಾ ಮಾಡಿ ಸೈ ಅನಿಸಿಕೊಂಡಿದ್ದ. ಶಾಲೆಯ ಸಮಯ ಬಿಟ್ಟು ಉಳಿದೆಲ್ಲಾ ಹೊತ್ತನ್ನು ಆ ಮರದ ತುಂಡುಗಳ, ಗೀಸುಳಿ ಸುರುಳಿಗಳ, ಗಮನೀಯ ಗಂಧಗಳ ನಡುವೆ ಕಳೀತಿದ್ದೆ. ಮತ್ತೆಲ್ಲರೊಡನೆ ಮಿತಭಾಷಿಯಾಗಿದ್ದ ವೇಲು ನನ್ನೊಡನೆ ಮಾತ್ರ ಎಡೆಬಿಡದೆ ಮಾತಾಡುತ್ತಿದ್ದ. ಅನಿವಾರ್ಯ ಅಂತಲ್ಲ, ನಾನು ಅನಾಯಾಸವಾಗಿ ಮಲಯಾಳ ಭಾಷೆ ಕಲಿತುದು ಅರಿವಿಗೇ ಬರದಂತೆ ನಡೆದುಹೋಯಿತು. ಸಾಂದರ್ಭಿಕ ಸಹಯೋಗಗಲ್ಲಿ ಮಕ್ಕಳ ಚುರುಕು ಸಾಧ್ಯತೆಗಳಾಗಿ ವ್ಯಕ್ತವಾಗುವುದು. ಮನೆಯಲ್ಲಿ ಒಂಟಿ ಮಗುವಾಗಿ ಬಾಲ್ಯ ನೀರಸವೆನಿಸಿತ್ತು. ಆಚಾರಿಯ ಸಾಹಚರ್ಯ ಆಟಗಳಿಗಾಗಿ ಅಕ್ಕಪಕ್ಕದ ಮನೆಗಳಿಗೆ ಅಲೆಯುವುದನ್ನು ಬಹಳಷ್ಟು ನಿಲ್ಲಿಸಿ ಬಿಟ್ಟಿತು.